ರವರು ವಸೂಲಾತಿ ದೃಢೀಕರಣ ಪತ್ರ ನೀಡಿದ್ದರೂ ಸಹ ಬಾಂಬೆ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಈ ತಡೆಯಾಜ್ಞೆ ತೆರವುಗೊಳಿಸಲು ಹಾಗೂ ಮುಂದೆ ಪ್ರಕರಣವನ್ನು ನಡೆಸಲು ಸರ್ಕಾರಿ ವಕೀಲರನ್ನು ನೇಮಕ ಮಾಡಲಾಗಿದೆ

ಇ) ಸದರಿ ಕಾರ್ಖಾನೆಯು ಖಾಸಗಿ ವಲಯದಲ್ಲಿರುವುದರಿಂದ ವಸತಿ ಗೃಹಗಳಿಗೆ ಮೂಲಭೂತ ಸೌಲಭ್ಯಗಳನ್ನು ಸರ್ಕಾರದಿಂದ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಗೃಹ ಇಲಾಖೆಯಿಂದ ತಿಳಿದು ಬಂದಿದೆ

ಕೆ ಹೆಚ್ ಡಿ.ಸಿ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸುವುದು

34 (561) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಭಾಗದಲ್ಲಿ ಗುಡಿ ಕೈಗಾರಿಕೆಯಾಗಿರುವ ಕೈಮಗ್ಗ ನೇಕಾರಿಕೆಯನ್ನು ಪ್ರೋತ್ಸಾಹಿಸಲು ಕೆಹೆಚ್ ಡಿ ಸಿ ಕೆಂದ್ರ ಕಛೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲು ಸರ್ಕಾರ ಆದೇಶ ಹೊರಡಿಸಿದೆಯೆ ಹಾಗಿದ್ದಲ್ಲಿ, ಎಂದು ಈ ಆದೇಶ ಹೊರಡಿಸಲಾಗಿದೆ

ಆ) ಆದೇಶ ಹೊರಡಿಸಿದ್ದರೂ ಈ ಸ್ಥಳಾಂತರ ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬರದೇ ಇರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣವೇನು

ಇ) ಈ ಕೇಂದ್ರ ಕಛೇರಿಯಲ್ಲಿ ಎಷ್ಟು ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಇವರಲ್ಲಿ ಎಷ್ಟು ಜನ ಹುಬ್ಬಳ್ಳಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ

ಈ) ಈ ನಿಗಮಕ್ಕೆ ಸಂಬಂಧಿಸಿದ ಉತ್ಪಾದನೆ, ಮಾರಾಟ, ಖರೀದಿ ಇಲಾಖೆಗಳ ವ್ಯವಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರಿನಲ್ಲಿಯೇ ಇರುವುದರಿಂದ ಉತ್ತರ ಕರ್ನಾಟಕ ನೇಕಾರರಿಗೆ ಮತ್ತು ಹುಬ್ಬಳ್ಳಿ ಕಛೇರಿಗೆ ಆಗುತ್ತಿರುವ ಪ್ರಯೋಜನವಾದರೂ ಏನು

ಉ) ನಿಗಮ ಸ್ಥಳಾಂತರದ ಸರ್ಕಾರಿ ಆದೇಶವನ್ನು ಧಿಕ್ಕರಿಸಿರುವ ಈ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ

ಊ) ಹುಬ್ಬಳ್ಳಿಯಲ್ಲಿರುವ ನೂಲು ಖರೀದಿಸುವ ವಿಭಾಗವನ್ನು ಬೇರೆಡೆಗೆ ಸ್ಥಳಾಂತರಿಸಲು ಸರ್ಕಾರ ಆಲೋಚಿಸಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು ದಿನಾಂಕ 28 10 96ರಲ್ಲಿ ಸರ್ಕಾರಿ ಆದೇಶ ಹೊರಡಿಸಿದೆ

ಆ) ನಿಗಮದ ವಿವಿಧ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ ಕೆಲವು ಸಿಬ್ಬಂದಿಯನ್ನು ಬೆಂಗಳೂರಿನಲ್ಲಿ ಉಳಿಸಿಕೊಳ್ಳಲಾಗಿದೆ

ಇ) ನಿಗಮದ ಕೇಂದ್ರ ಕಛೇರಿಯು ಹುಬ್ಬಳ್ಳಿಯಲಾಗಿದ್ದು ಅಲ್ಲಿ 63 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ

ಈ) ಜಂಟಿ ನಿರ್ದೇಶಕರು, ಉತ್ಪಾದನೆ, ಮಾರಾಟ, ಲೆಕ್ಕ ಪತ್ರ ವಿಭಾಗಗಳ ವ್ಯವಸ್ಥಾಪಕರು ತಾಂತ್ರಿಕ ಅಧಿಕಾರಿಗಳು ಬೇಕಾದ ಸಿಬ್ಬಂದಿಯೊಂದಿಗೆ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು

ವ್ಯವಸ್ಥಾಪಕರ ನಿರ್ದೇಶಕರು ಕಛೇರಿಯ ಕೆಲಸಕಾರ್ಯಗಳಿಗೆ ಕೆಲವೊಮ್ಮೆ ಬೆಂಗಳೂರಿಗೆ ಬರುತ್ತಾರೆ ವಿಶೇಷವಾಗಿ ಹಣಕಾಸು ಮಾರುಕಟ್ಟೆ ಹಾಗೂ ವಿವಿಧ ಇಲಾಖೆಗಳ ಜೊತೆ ಸಮನ್ವಯ ಸಂಧಿಸಲು ಅವರು ಬೆಂಗಳೂರಿಗೆ ಬರುತ್ತಿರುತ್ತಾರೆ

ಉ) ಸರ್ಕಾರಿ ಆದೇಶದ ಉಲ್ಲಂಘನೆ ಆಗಿರುವುದಿಲ್ಲವಾದ್ದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಇಲ್ಲ

ತುಮಕೂರು ಜಿಲ್ಲೆಯಲ್ಲಿರುವ ಗಣಿಗಾರಿಕೆಗಳು

35 (245) ಶ್ರೀ ಲಕ್ಷ್ಮಿನಾರಾಯಣ ಎಂ ಡಿ (ತುರುವೇಕೆರೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಒಟ್ಟು ಎಷ್ಟು ಗಣಿಗಾರಿಕೆಗಳಿಗೆ ಸರ್ಕಾರ ಮಂಜೂರಾತಿ ನೀಡಿದೆ

ಆ) ಗಣಿಗಾರಿಕೆ ಮಾಡಲು ಲೈಸೆನ್ಸ್ ತೆಗೆದುಕೊಂಡಿರುವ ಕಂಪೆನಿಗಳಾವುವು

ಇ) ಪ್ರತಿ ವರ್ಷ ಸರಿಯಾದ ಮಾರ್ಗದಲ್ಲಿ ಸರ್ಕಾರಕ್ಕೆ ಬರುವ ಆದಾಯವನ್ನು ಸಂದಾಯ ಮಾಡುತ್ತಿರುವರೆ

ಈ) ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆಯನ್ನು ಕಟ್ಟದೆ ಇರುವ ಗಣಿಗಾರಿಕೆ ಗುತ್ತಿಗೆದಾರರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ತುಮಕೂರು ಜಿಲ್ಲೆಯಲ್ಲಿ ಸರ್ಕಾರವು 51 ಗಣಿ ಗುತ್ತಿಗೆಗಳಿಗೆ ಮಂಜೂರಾತಿ ನೀಡಿದೆ

ಆ) ಗಣಿಗಾರಿಕೆ ಮಾಡಲು ಲೈಸೆನ್ಸ್ ತೆಗೆದುಕೊಂಡಿರುವ ಕಂಪೆನಿ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ

ಇ) ಹೌದು

ಈ) ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆಯನ್ನು ಕಟ್ಟದೆ ಇರುವ ಗಣಿಗಾರಿಕೆ ಗುತ್ತಿಗೆಗಳನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಬಾಕಿಯನ್ನು ಭೂ ಕಂದಾಯದಂತೆ ವಸೂಲಿ ಮಾಡಲು ಕ್ರಮ ಕೈಗೊಂಡಿದೆ

Annexure - I

Sl No	Name of the lessee s Smt/Sriyuths	ML No	Mineral	Date of Grant & Extent	Extent & Location
1	2	3	4	5	6
1	Kamalabai	1442	FeOre	14 08 79 20 years	33 10Hect Manchakallu
2	Kamalabai	2187	FeOre	19 10 88 20 years	23 47 hect Honnebagi
3	Kamalabai	1508	FeOre	12 05 78 20 years	24 28 Hect Sondenahalli